ಕರ್ನಾಟಕ ಸರ್ಕಾರ

# ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ.

ದಿನಾಂಕ: 12-09-2022

ಕ್ರಮಾಂಕ: ಎಲ್.ಎನ್.ಡಿ.ಸಿ.ಆರ್: 111 /2022-23

ಲಗತ್ತು: ಕಡತ

ರವರಿಗೆ

ಮಾನ್ಯ ಜಿಲ್ಲಾಧಿಕಾರಿಗಳು,

ಚಿಕ್ಕಬಳ್ಳಾಪುರ ಜಿಲ್ಲೆ.

ಮಾನ್ಯರೇ.

ವಿಷಯ: ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.51 ರಲ್ಲಿ 6-20 ಎಕರೆ ಜಮೀನು ಮೀಸಲು ಅರಣ್ಯ ಜಾಗದಲ್ಲಿ ರಸ್ತೆಗಾಗಿ ಉಪಯೋಗಿಸಿದ್ದು, ಬದಲಾಗಿ ಸ.ನಂ.53 ರಲ್ಲಿ 4-20 ಎಕರೆ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರಲ್ಲಿ 2-00 ಎಕರೆ ಜಮೀನನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ತಹಶೀಲ್ದಾರ್, ಬಾಗೇಪಲ್ಲಿ ತಾಲ್ಲೂಕು ರವರ ವರದಿ ಕ್ರಮಾಂಕ:ಎಲ್.ಎನ್.ಡಿ.ಸಿಆರ್:28/2022-23 ದಿನಾಂಕ:13.07.2022

2) ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ ಉಪವಿಭಾಗ ಚಿಕ್ಕಬಳ್ಳಾಪುರ ಜಿಲ್ಲೆ ರವರ ಪತ್ರದ ಸಂಖ್ಯೆ: ಸಕಾಅ.ಯೋಉವಿ.ಚಿಪುರ.ಸಿಆರ್: 1/2022-23 ದಿನಾಂಕ:09.06.2022

*****

ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.51 ರಲ್ಲಿ 6-20 ಎಕರೆ ಜಮೀನು ಮೀಸಲು ಅರಣ್ಯ ಜಾಗದಲ್ಲಿ ರಸ್ತೆಗಾಗಿ ಉಪಯೋಗಿಸಿದ್ದು, ಬದಲಾಗಿ ಸ.ನಂ.53 ರಲ್ಲಿ ಗೋಮಾಳ ಜಮೀನಿನಲ್ಲಿ 4-20 ಎಕರೆ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರಲ್ಲಿ 2-00 ಎಕರೆ ಜಮೀನನ್ನು ಮಂಜೂರು ಮಾಡಲು ವರದಿಯನ್ನು ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ ಉಪವಿಭಾಗ ಚಿಕ್ಕಬಳ್ಳಾಪುರ ಜಿಲ್ಲೆ ರವರು ಮನವಿ ಸಲ್ಲಿಸಿ ಬಾಗೇಪಲ್ಲಿ ತಾಲ್ಲೂಕು ಪ್ಯಾಕೇಜದ ಸಂಖ್ಯೆ: ಕೆ.ಎನ್.30-02 ರ ಪಾತಪಾಳ್ಯದಿಂದ ಪೋಲನಾಯಕನಹಳ್ಳಿ ರಸ್ತೆಯ ಕಾಮಗಾರಿ ಮಂಜೂರಾಗಿ, ಈಗಾಗಲೇ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ರಸ್ತೆಯ ಒಟ್ಟು ಉದ್ದ 15.270 ಕಿ.ಮೀ. ಆಗಿರುತ್ತದೆ. ಸದರಿ ರಸ್ತೆಯ ಪೈಕಿ ಸರಪಳಿ 7.200 ಕಿ.ಮೀ ಯಿಂದ 8.980 ಕಿ.ಮೀ ವರೆಗೆ ಸುಮಾರು 1.780 ಕಿ.ಮೀ ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುತ್ತದೆ ಎಂದು ಅರಣ್ಯ ಇಲಾಖೆಯವರು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದು, ಅನುಮತಿ ಪಡೆದ ನಂತರ ಕಾಮಗಾರಿ ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ. ಆದರೆ ಅನುಮತಿ ಪಡೆಯಲು ಅರಣ್ಯ ಇಲಾಖೆಯಿಂದ 2.60 ಹೆಕ್ಟೇರ್‌ನಷ್ಟು ಜಮೀನನ್ನು ಪರಿಹಾರ ಅರಣ್ಯೀಕರಣಕ್ಕಾಗಿ ಜಮೀನು ನೀಡಿದರೆ ಮೇಲಿನ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅತ್ಯವಶ್ಯಕವಾಗಿರುವುದರಿಂದ ತಾಲ್ಲೂಕಿನ ಯಾವುದೇ ಭಾಗದಲ್ಲಿ 2.60 ಹೆಕ್ಟೇರ್‌ನಷ್ಟು ಜಮೀನನ್ನು ಗುರುತಿಸಿ ನಕ್ಷೆಯೊಂದಿಗೆ ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಸಲುವಾಗಿ ಕೋರಿರುತ್ತಾರೆ.

ಆದ್ದರಿಂದ ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.53 ರಲ್ಲಿ 4- ಎಕರೆ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರಲ್ಲಿ 2-00 ಎಕರೆ ಜಮೀನನ್ನು ಅರಣ್ಯ ಇಲಾಖೆರವರಿಗೆ ಕಾಯ್ದಿರಿಸಲು ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

ಬಾಗೇಪಲ್ಲಿ ತಾಲ್ಲೂಕು ಸಿಂಗಪ್ಪಗಾರಿಪಲ್ಲಿ ಗ್ರಮದ ಸ.ನಂ.53 ರ ಪಹಣಿಯಲ್ಲಿ ಗೋಮಾಳ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರ ಪಹಣಿಯಂತೆ ಸರ್ಕಾರಿ ಗೋಮಾಳ ಎಂದು ವರ್ಗೀಕರಣಗೊಂಡಿರುತ್ತದೆ. ನಮೂನೆ-53, 57 ರಡಿ ಜಮೀನು ಮಂಜೂರಿ ಕೋರಿ ಯಾರು ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ, ಸದರಿ ಜಮೀನಿನ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ, ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದಿಲ್ಲ, ಹಾಲಿ ಪ್ರಸ್ತಾವನೆ ಸಲ್ಲಿಸಿರುವ ಜಮೀನಿಗೆ ಈ ಹಿಂದೆ ಯಾವುದೇ ಉದ್ದೇಶಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ, ಸಿಂಗಪ್ಪಗಾರಿಪಲ್ಲಿ ಗ್ರಾಮದಿಂದ 26 ಕಿ.ಮೀ ಮತ್ತು ದೇವಳವಾರಪಲ್ಲಿ ಗ್ರಾಮದಿಂದ 28 ಕಿ.ಮೀ. ದೂರದಲ್ಲಿರುತ್ತದೆಂದು ವರದಿ ಸಲ್ಲಿಸಿರುತ್ತಾರೆ.

ಸಿಂಗಪ್ಪಗಾರಪಲ್ಲಿ ಗ್ರಾಮದಲ್ಲಿ ಒಟ್ಟು 203 ರಾಸುಗಳಿದ್ದು, ಸದರಿ ಗ್ರಾಮದಲ್ಲಿರುವ ಒಟ್ಟು ಗೋಮಾಳ ಜಮೀನಿನ ಒಟ್ಟು ವಿಸ್ತೀರ್ಣ 368-23 ಎಕರೆ ಈ ಪೈಕಿ 27-23 ಎಕರೆ ಗೋಮಾಳ ಜಮೀನು ಮಂಜೂರಾಗಿರುತ್ತದೆ. ದೇವಳವಾರಪಲ್ಲಿ ಗ್ರಾಮದಲ್ಲಿ ಒಟ್ಟು 468 ರಾಸುಗಳಿದ್ದು, ಸದರಿ ಗ್ರಾಮದಲ್ಲಿರುವ ಒಟ್ಟು ಗೋಮಾಳ ಜಮೀನಿನ ಒಟ್ಟು ವಿಸ್ತೀರ್ಣ 1103-18 ಎಕರೆ ಈ ಪೈಕಿ 134-00 ಎಕರೆ ಜಮೀನು ವಿಲೇ ಆಗಿರುತ್ತದೆ. ಉಳಿಕೆ 969-10 ಎಕರೆ ಇರುವುದಾಗಿ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.53 ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರ ಜಮೀನಿಗೆ ತಾಲ್ಲೂಕು ಮೋಜಣಿದಾರರು ಸರ್ವೆ ನಕ್ಷೆ ತಯಾರಿಸಿ ಸಂಬಂಧಪಟ್ಟ ತಹಸೀಲ್ದಾರ್ ಬಾಗೇಪಲ್ಲಿ ತಾಲ್ಲೂಕು, ವಲಯ ಅರಣ್ಯಾಧಿಕಾರಿಗಳು ಬಾಗೇಪಲ್ಲಿ ವಲಯ, ತಾಲ್ಲೂಕು ಮೋಜಣಿದಾರರು, ರಾಜಸ್ವ ನಿರೀಕ್ಷಕರು, ಪಾತಪಾಳ್ಯ ಹೋಬಳಿ, ಗ್ರಾಮಲೆಕ್ಕಾಧಿಕಾರಿ ಧೃಢೀಕರಿಸಿ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಪಲ್ಲಿ ಗ್ರಾಮದ ಸ.ನಂ.53 ರ ಜಮೀನಿಗೆ ಸರ್ವೆ ನಕ್ಷೆಯಂತೆ ಚೆಕ್ಕುಬಂದಿ:

| | |
|---|---|
| ಪೂರ್ವ | ದೇವಲವಾರಪಲ್ಲಿ ಗಡಿ |
| ಪಶ್ಚಿಮ | ಸ.ನಂ.51, 53 |
| ಉತ್ತರ | ದೇವಲವಾರಪಲ್ಲಿ ಗಡಿ |
| ದಕ್ಷಿಣ | ಗುಟ್ಟ |

ಪ್ರಸ್ತಾಪಿತ ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ದೇವಳವಾರಪಲ್ಲಿ ಗ್ರಾಮದ ಸ.ನಂ.62 ರ ಜಮೀನಿಗೆ ಸರ್ವೆ ನಕ್ಷೆಯಂತೆ ಚೆಕ್ಕುಬಂದಿ:

| | |
|---|---|
| ಪೂರ್ವ | ಇದೇ ಸ.ನಂ.ನ ಉಳಿಕೆ ಜಮೀನು |
| ಪಶ್ಚಿಮ | ಸಿಂಗಪ್ಪಗಾರಪಲ್ಲಿ ಗಡಿ |
| ಉತ್ತರ | ಸ.ನಂ.63 |
| ದಕ್ಷಿಣ | ಇದೇ ಸ.ನಂ.ನ ಉಳಿಕೆ ಜಮೀನು |

ಆದ್ದರಿಂದ ಪ್ರಸ್ತಾಪಿತ ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.51 ರಲ್ಲಿ 6-20 ಎಕರೆ ಜಮೀನು ಮೀಸಲು ಅರಣ್ಯ ಜಾಗದಲ್ಲಿ ರಸ್ತೆಗಾಗಿ ಉಪಯೋಗಿಸಿದ್ದು, ಬದಲಾಗಿ ಸ.ನಂ.53 ರಲ್ಲಿ 4-20 ಎಕರೆ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರಲ್ಲಿ 2-00 ಎಕರೆ ಜಮೀನನ್ನು ಮಂಜೂರು ಮಾಡಲು ಕೋರಿ ತಹಶೀಲ್ದಾರ್ ರವರು ಶಿಫಾರಸ್ಸು ಮಾಡಿರುತ್ತಾರೆ.

ತಹಶೀಲ್ದಾರ್ ಬಾಗೇಪಲ್ಲಿ ತಾಲ್ಲೂಕು ರವರ ವರದಿಯಂತೆ ಹಾಗೂ ತಾಲ್ಲೂಕು ಮೋಜಿಣಿದಾರರು ತಯಾರಿಸಿರುವ ಸರ್ವೆ ನಕ್ಷೆಗೆ ತಹಸೀಲ್ದಾರ್ ಬಾಗೇಪಲ್ಲಿ ತಾಲ್ಲೂಕು, ವಲಯ ಅರಣ್ಯಾಧಿಕಾರಿಗಳು ಬಾಗೇಪಲ್ಲಿ ವಲಯ, ತಾಲ್ಲೂಕು ಮೋಜಿಣಿದಾರರು, ರಾಜಸ್ವ ನಿರೀಕ್ಷಕರು, ಪಾತಪಾಳ್ಯ ಹೋಬಳಿ, ಗ್ರಾಮಲೆಕ್ಕಾಧಿಕಾರಿ ರವರು ಧೃಢೀಕರಿಸಿ ವರದಿ ಸಲ್ಲಿಸಿದ್ದು, ಹಾಗೂ ಜಿಲ್ಲಾ ಅರಣ್ಯಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರು (CA LAND SUITABILITY CERTIFICATE UNDER FCA 1980) ಫಾರಂ-ಎ ಸೂಕ್ತತೆ ಪ್ರಮಾಣ ಪತ್ರ ಸಲ್ಲಿಸಿದ್ದು, ಆದ್ದರಿಂದ ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ ಹೋಬಳಿ, ಸಿಂಗಪ್ಪಗಾರಿಪಲ್ಲಿ ಗ್ರಾಮದ ಸ.ನಂ.51 ರಲ್ಲಿ 6-20 ಎಕರೆ/ಗುಂಟೆ ಜಮೀನು ಮೀಸಲು ಅರಣ್ಯ ಜಾಗದಲ್ಲಿ ರಸ್ತೆಗಾಗಿ ಉಪಯೋಗಿಸಿದ್ದು, ಬದಲಾಗಿ ಸ.ನಂ.53 ರಲ್ಲಿ 4-20 ಎಕರೆ ಮತ್ತು ದೇವಳವಾರಪಲ್ಲಿ ಗ್ರಾಮದ ಸ.ನಂ.62 ರಲ್ಲಿ 2-00 ಎಕರೆ ಜಮೀನನ್ನು ಅರಣ್ಯ ಇಲಾಖೆ ರವರಿಗೆ ಕಾಯ್ದಿರಿಸುವ ಬಗ್ಗೆ ಮುಂದಿನ ತಮ್ಮ ಅವಗಾಹನೆಗೆ ಸಲ್ಲಿಸಿದೆ. ಉಲ್ಲೇಖಿತ ಪತ್ರ ಲಗತ್ತಿಸಿದೆ.

ತಮ್ಮ ನಂಬುಗೆಯ,

7/9/22

ಉಪವಿಭಾಗಾಧಿಕಾರಿ
ಚಿಕ್ಕಬಳ್ಳಾಪುರ ಉಪವಿಭಾಗ,
ಚಿಕ್ಕಬಳ್ಳಾಪುರ

ಪ್ರತಿಯನ್ನು:
1.ತಹಸೀಲ್ದಾರ್ ಬಾಗೇಪಲ್ಲಿ ತಾಲ್ಲೂಕು ರವರ ಮಾಹಿತಿಗಾಗಿ.